











ಹಗ್ಗ ನುಸುಳಲು ಸಾಧ್ಯವಿರುವ ಸಣ್ಣ ಸೀಳಿರುವ ಸೇತುವೆಗಳನ್ನೋ ಅಥವಾ ಸುರುಳಿಯಂತೆ ಸುತ್ತಿರುವ ಸೇತುವೆಯನ್ನೋ ರಚಿಸುತ್ತಿದ್ದರು.

ನಾಲೆಗಳ ಈ ಸುವರ್ಣಯುಗ ಬಹಳ ಕಾಲ ಮುಂದುವರೆಯಲಿಲ್ಲ. ಇಪ್ಪತ್ತನೆಯ ಶತಮಾನದ ಆದಿಯಲ್ಲೇ ಉಗಿಬಂಡಿ ಹೊಂದಿಸಿರುವ ರೈಲುಗಳ ಸಂಚಾರ ಪ್ರಾರಂಭವಾಗಿ, 1950ರ ವೇಳೆಗೆ ದೋಣಿಗಳು ಮಾಡುತ್ತಿದ್ದ ಕೆಲಸವನ್ನು ರೈಲುಗಳೇ ಹೆಚ್ಚಾಗಿ ಮಾಡಲು ಪ್ರಾರಂಭಿಸಿದ್ದವು. ರೈಲುಗಳು ದೋಣಿಗಳಿಗಿಂತ ವೇಗವಾಗಿ ಓಡುತ್ತಿದ್ದರಿಂದ, ಕಡಿಮೆ ಸಮಯದಲ್ಲಿ ಮತ್ತು ಕಡಿಮೆ ವೆಚ್ಚದಲ್ಲಿ ಹೆಚ್ಚು ಸರಕುಗಳನ್ನು ರವಾನಿಸಲು ಸಾಧ್ಯವಾಗುತ್ತಿತ್ತು. ಉಗಿಯಂತ್ರಗಳನ್ನು ದೋಣಿಗಳಿಗೆ ಅಳವಡಿಸಿಕೊಂಡರೂ ಸಹ ಹಳೆಯ ನಾಲೆಗಳಲ್ಲಿ ಅವುಗಳನ್ನು ವೇಗವಾಗಿ ಓಡಿಸಲು ಸಾಧ್ಯವಾಗಲಿಲ್ಲ. ನಿಧಾನವಾಗಿ ಚಲಿಸುವ ದೋಣಿಗಳಿಂದ ಉಂಟಾಗುವ ಸಣ್ಣ ಅಲೆಗಳನ್ನು ತಡೆದುಕೊಳ್ಳುವಷ್ಟು ಶಕ್ತಿ ಮಾತ್ರ ನಾಲೆಗಳ ಗೋಡೆಗಳಿಗೆ ಇದ್ದಿದ್ದರಿಂದ ಉಗಿಯಂತ್ರವನ್ನು ಅಳವಡಿಸಿಕೊಂಡಿದ್ದ ದೋಣಿಗಳೂ ನಿಧಾನವಾಗೇ ಚಲಿಸಬೇಕಿತ್ತು. ಹಡಗುಗಳು ಹಾದುಹೋಗುವಂತಹ ದೊಡ್ಡ ನಾಲೆಗಳ ಉಪಯೋಗ ಮುಂದುವರೆಯಿತಾದರೂ ಕಾಲಕ್ರಮೇಣ ಹಲವಾರು ನಾಲೆಗಳನ್ನು ಉಪಯೋಗಿಸದೇ ಕೈಬಿಟ್ಟು ಅವುಗಳು ಪಾಳುಬಿದ್ದವು.

ಇಪ್ಪತ್ತನೆಯ ಶತಮಾನದ ಎರಡನೆಯ ಭಾಗದಲ್ಲಿ ಇಂಗ್ಲೆಂಡಿನ ಜನರು ನಾಲೆಗಳ ವಿಷಯದಲ್ಲಿ ಮತ್ತೆ ಉತ್ಸಾಹ ಬೆಳೆಸಿಕೊಂಡರು. ಆದರೆ ವ್ಯಾಪಾರ ಉದ್ಯಮಗಳಿಗೆಂದಲ್ಲ, ಹವ್ಯಾಸಕ್ಕೆಂದು. ಉಪಯೋಗಿಸದೆ ನಿಂತಿದ್ದ ದೋಣಿಗಳನ್ನು ನಾಲೆಗಳ ಮೇಲೆ ವಿಹಾರ ಹೋಗುವುದಕ್ಕೆ, ಮತ್ತು ವಾಸಿಸುವುದಕ್ಕೆ ಅಣಿಮಾಡಿದರು. ರಜಾ ದಿನಗಳಲ್ಲಿ ಜನರು ದೋಣಿಗಳನ್ನು ಬಾಡಿಗೆಗೆ ತೆಗೆದುಕೊಂಡು ವಿಹಾರ ಹೋಗುವುದು ಪ್ರಿಯವಾದ ಹವ್ಯಾಸವಾಗಿ ಬೆಳೆಯಿತು. ನಾಲೆಗಳನ್ನು ಉದ್ಧಾರ ಮಾಡುವುದಕ್ಕಾಗಿ ಸಂಘಗಳನ್ನು ಕಟ್ಟಿದರು. ಸರ್ಕಾರದಿಂದಲೂ ಬೆಂಬಲ ಪಡೆದರು. ಹಣವೆತ್ತಿ, ಸ್ವಯಂಸೇವಕರನ್ನು ಕಲೆಹಾಕಿ, ಪಾಳುಬಿದ್ದ ನಾಲೆಗಳಿಗೆ ಜೀವ ತುಂಬಿದರು. ಕೆಲವರಂತೂ ದೋಣಿಯಲ್ಲಿಯೇ ಮನೆ ಮಾಡಿಕೊಂಡು ಅದರಲ್ಲಿಯೇ ಜೀವನ ಪ್ರಾರಂಭಿಸಿದರು.

ಈಗ 'ನದಿ ಮತ್ತು ನಾಲೆಗಳ ವಿಶ್ವಸ್ತ ಮಂಡಲಿ'ಯು **(River and Canal Trust)** ಸುಮಾರು ಎರಡು ಸಾವಿರ ಮೈಲಿ ಉದ್ದದಷ್ಟು ಜಲಮಾರ್ಗಗಳನ್ನು ನೋಡಿಕೊಳ್ಳುತ್ತದೆ. ಮಂಡಳಿಯು ನಡೆಸಿದ ಸಂಶೋಧನೆಯ ಪ್ರಕಾರ ಮನುಷ್ಯರ ಆರೋಗ್ಯ ಮತ್ತು ಮನಸ್ಥಿತಿಗೆ ನೀರಿನ ಸಾಮೀಪ್ಯ ಬಹಳ ಒಳ್ಳೆಯದಂತೆ. ಆದ್ದರಿಂದ ಅವರು ನೂರಾರು ನಾಲೆಗಳನ್ನೂ, ಅದಕ್ಕೆ ಹೊಂದಿಕೊಂಡಿರುವ ಕಾಲುದಾರಿ, ಸೇತುವೆ, ಮೇಲ್ಗಾಲುವೆ, ಇವುಗಳೆಲ್ಲವನ್ನೂ ಸುಸ್ಥಿತಿಯಲ್ಲಿಡಲು ಶ್ರಮಿಸುತ್ತಾರೆ. ನಾಲೆಗಳ ಸುತ್ತಮುತ್ತ ವಾಸಿಸುವ ಜನರನ್ನೂ ಈ ಕಾರ್ಯದಲ್ಲಿ ಪಾಲ್ಗೊಳ್ಳುವಂತೆ ಹುರಿದುಂಬಿಸುತ್ತಾರೆ. ನೂರಾರು ಸ್ವಯಂಸೇವಕರು ಜಲಬಂಧಗಳ ನಿರ್ವಹಣೆ ಮುಂತಾದ ಕೆಲಸಗಳಲ್ಲಿ ತೊಡಗಿದ್ದಾರೆ. ಹೀಗಾಗಿ, ಲಕ್ಷಾಂತರ ಜನರು ಅದರ ಸೌಕರ್ಯಗಳನ್ನು ಅನುಭವಿಸುತ್ತಾರೆ.

ಓಡಮನೆ ವಾಸ, ಹವ್ಯಾಸಕ್ಕಾಗಿ ದೋಣಿ ವಿಹಾರ, ಅಂಬಾಟ **(canoe)** ಚಲನೆ, ಮೀನುಗಾರಿಕೆ, ಮುಂತಾದವುಗಳು ಬಹಳ ಜನರಿಗೆ ಸಂತೋಷ ನೀಡುತ್ತವೆ. ನಾಲೆಗಳ ಅಕ್ಕಪಕ್ಕ ಸಾಲುಮರಗಳಿರುವುದರಿಂದ ಪ್ರಾಣಿ, ಪಕ್ಷಿ, ಕೀಟಗಳಿಗೆ ದೇಶದ ಒಂದು ಕಡೆಯಿಂದ ಇನ್ನೊಂದು ಕಡೆಗೆ ಓಡಾಡಲು ಅವಿರತ ಉದ್ಯಾನವನವೊಂದನ್ನು ನಿರ್ಮಿಸಿದಂತಾಗಿದೆ. ನಾಲೆಗಳ ಪಕ್ಕದ ಕಾಲುದಾರಿಯಲ್ಲಿ ಮೈಲಿಗಟ್ಟಲೆ ನಡೆಯುವುದು ಅತ್ಯಂತ ಆಪ್ಯಾಯಮಾನವಾದ ಅನುಭವ!

ಪ್ರತಿಕ್ರಿಯಿಸಿ: **feedback@sudha.co.in**

